**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020 C/W ಎಸ್.ಸಿ.ನಂ.137/2022**

**(**ಚಾ.ಸಾ.11/ಪ್ರಾ.ಸಾ.9**)**

ತಾಃ 19.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಡಾ.ಉಶಾ ರಾಣಿ |
| ಗಂಡನ ಹೆಸರು | ಹರ್ಷವರ್ಧನ್ |
| ವಯಸ್ಸು | 32 ವರ್ಷ |
| ಉದ್ಯೋಗ | ಕ್ಲಿನಿಕಲ್ ಅಸಿಸ್ಟೆಂಟ್, ಅನುಪಮಾ ಆಸ್ಪತ್ರೆ |
| ವಾಸ ಸ್ಥಳ | ಹೆಗ್ಗನಹಳ್ಳಿ ಕ್ರಾಸ್, ಬೆಂಗಳೂರು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 7 ವರ್ಷಗಳಿಂದ ಅನುಪಮಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿಃ08.08.2019 ರಂದು ಬೆಳಿಗ್ಗೆ 8.00 ಗಂಟೆಗೆ ನಾನು ಕರ್ತವ್ಯಕ್ಕ ಹಾಜರಾಗಿದ್ದು ಆ ದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ.19 ರವರು ಆಸ್ಪತ್ರೆಗೆ ಭೇಟಿ ಗಾಯಾಳುಗಳಾದ ಚಾಸಾ.2 ಮತ್ತು 3 ರವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಬೇಕಾಗಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಚಾಸಾ.2 ಮತ್ತು 3

ರವರ ಹೇಳಿಕೆಗಳನ್ನು ಘಟನೆಗೆ ಸಂಬಂಧಿಸಿದಂತೆ ಚಾಸಾ.19 ರವರು ನನ್ನ ಸಮಕ್ಷಮ ದಾಖಲಿಸಿರುತ್ತಾರೆ. ಸಾಕ್ಷಿದಾರರು ತನ್ನ ಮುಂದೆ ದಾಖಲಿಸಿಕೊಂಡ ಚಾಸಾ.2 ಮತ್ತು 3 ರವರ ಹೇಳಿಕೆಗಳನ್ನು ಹಾಗಾ ಅದರಲ್ಲಿ ಇರುವ ತನ್ನ ಸಹಿಗಳನ್ನು ನೋತಿ ಗುರುತಿಸಿದ್ದು ಅವುಗಳನ್ನು ನಿ.ಪಿ.8, 9 ನಿ.ಪಿ.8(ಎ) ಹಾಗೂ 9(ಎ) ಎಂದು ಗುರುತಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಯಾರು ಪ್ರತಿನಿಧಿಸಿಲ್ಲ. ಪುನಃ ಪ್ರಕರಣವನ್ನು ಮಧ್ಯಾಹ್ನ 12.55 ರಲ್ಲಿ ಕೂಗಿಸಿದ್ದು ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿಗೆ ನ್ಯಾಯಾಲಯವು ಆತನ ಪರ ವಕೀಲರು ಹಾಜರಾಗದೇ ಇರುವ ವಿಚಾರವನ್ನು ತಿಳಿಸಿ ಅವಶ್ಯಕತೆ ಇದ್ದಲ್ಲಿ ಸರ್ಕಾರಿ ವಕೀಲರನ್ನು ನೇಮಿಸಿಕೊಳ್ಳಲು ತಿಳಿಸಿದ್ದು ಆರೋಪಿ ತನ್ನ ಪರ ವಕೀಲರನ್ನು ಮುಂದಿನ ಹಿಯರಿಂಗ್ ತಾರೀಖಿನಂದು ಹಾಜರುಪಡಿಸುವುದಾಗಿ ಹೇಳಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಎಸ್.ಸಿ.ನಂಬರ್ 137/2022 ರ ಕೇಸಿನ ಆರೋಪಿ ಪರ ವಕೀರನ್ನು ಕೂಗಿಸಿದ್ದು ಗೈರು ಹಾಜರಿದ್ದು ಯಾರು ಪ್ರತಿನಿಧಿಸದೇ ಇರುವ ಕಾರಣ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃಇಲ್ಲ.</u>**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.